ಮೊದಲೆಲ್ಲ ಬೆಣಗಲ್ಲು ಸಂಗ್ರಹಿಸಿ ಸುಟ್ಟು ಕುಟ್ಟಿ ಪುಡಿಮಾಡಿಟ್ಟುಕೊಳ್ಳುತ್ತಿದ್ದರು. ಅದರ ಪುಡಿಯನ್ನು ಮತ್ತು ಹವಳ, ಪಂಚರತ್ನಗಳನೆಲ್ಲ ಸೇರಿಸಿ ಇಟ್ಟುಕೊಳ್ಳುತ್ತಿದ್ದರಂತೆ. ಈಗ ಬೆಣಚುಗಲ್ಲು ಪುಡಿಯನ್ನು ಹೆಚ್ಚು ಬಳಸುತ್ತಾರೆ. ಕೆಲವು ಕಡೆ ಅಕ್ಕಿಹಿಟ್ಟು ಬಳಸುತ್ತಾರೆ.

ಮಲೆನಾಡಿನ ದೀವರು ಗೋಡೆಗಳಿಗೆ ಚಿತ್ತಾರ ಬರೆಯುತ್ತಾರೆ. ಅದಕ್ಕೆ ಅವರು ನೆನೆಹಾಕಿದ ಅಕ್ಕಿಯನ್ನು ನುಣ್ಣಗೆ ರುಬ್ಬಿ ಅಂಟುಅಂಟಾದ ಹಿಟ್ಟಿನಿಂದ ಚಿತ್ರ ಬರೆಯುತ್ತಾರೆ.

ಹಾಲಕ್ಕಿ ಜನರು ಚುಂಗಿನಾರು, ಅಡಕೆಸಿಪ್ಪೆ. ಕರಡಗಳಿಂದ ಗೋಡೆಗೆ ಗೆರೆ ಎಳೆದು ಚಿತ್ರ ಬಿಡಿಸುತ್ತಾರೆ. ಈ ರಂಗೋಲಿಯನ್ನು ಬಂಗಾಳದಲ್ಲಿ ಅಲ್ಪನಾ, ರಾಜಸ್ಥಾನದಲ್ಲಿ ಮಾಂಡನಾ, ಮಹಾರಾಷ್ಟ್ರದಲ್ಲಿ ರಂಗೋಳಿ, ಕೇರಳದಲ್ಲಿ ಪೂಕಳಮ್ ಎಂದು ಕರೆಯುತ್ತಾರೆ.

ಮಹಾರಾಷ್ಟ್ರದ ವಾರಲಿ ಎಂಬ ಬುಡಕಟ್ಟು ಸಮುದಾಯದವರು ಬಿಡಿಸುವ ರಂಗೋಲಿ 'ವರ್ಲಿ ಕಲೆ' ಎಂದೇ ಪ್ರಸಿದ್ಧ. ಈಗ ಅದನ್ನು ಪೇಂಟಿಂಗ್ ರೂಪದಲ್ಲಿ ಗೋಡೆಗಳ ಮೇಲೆ, ಸೀರೆ ಮೇಲೆಲ್ಲ ಬಿಡಿಸುತ್ತಾರೆ.

ಪ್ರಾದೇಶಿಕ ಭಿನ್ನತೆಯಿದ್ದರೂ ಸರ್ವವ್ಯಾಪಿಯಾಗಿರುವ ರಂಗೋಲಿಕಲೆಯನ್ನು ಧಾರ್ಮಿಕ ಕಲೆ ಎನ್ನಲಾಗುತ್ತದೆ. ಆದರೆ ಇದೊಂದು ಜನಪದ ಕಲೆ. ಹಾಗೆ ನೋಡಿದರೆ ರಂಗೋಲಿ ಒಂದು ಶಿಷ್ಟಪದ. ಜಾನಪದದಲ್ಲಿ ಇದನ್ನು ಕರೆಯುವುದೇ ಗೀಟು ಹಾಕೋದು, ಸೇಡಿ ಬರೆಯೋದು ಅಂತಲೇ. ಮದುವೆಯಲ್ಲಿ ಮಾತ್ರ ಹಸೆ ಬರೆಯೋದು ಎಂದು ಕರೆಯುತ್ತಾರೆ. ಹಸೆಮಣೆ ಅಂತಲೇ ಇದೆ. ಮಣೆಯ ಮೇಲೆ ಚಿತ್ತಾರ ಬಿಡಿಸುವುದು.

'ಬರೀ ಕರಾವಳಿಯನ್ನು ತೆಗೆದುಕೊಂಡರೂ ವೈವಿಧ್ಯಮಯ ರಂಗೋಲಿಗಳಿವೆ. ಒಂದೊಂದು ಸಮುದಾಯದಲ್ಲಿ ಒಂದೊಂದು ರೀತಿಯ ರಂಗೋಲಿಗಳಿವೆ. ಪ್ರತಿ ವಿನ್ಯಾಸಗಳಲ್ಲಿ ಇದು ಭಿನ್ನವಾಗುತ್ತ ಹೋಗುತ್ತದೆ. ಸಂಶೋಧನೆ ಮಾಡುವಾಗ ಕರಾವಳಿ ರಂಗೋಲಿ, ಕರಾವಳಿ ಕರ್ನಾಟಕದ ಬುಡಕಟ್ಟು ಜನರ ರಂಗೋಲಿ ಕಲೆಯನ್ನು ಅಭ್ಯಸಿಸುವಾಗ ಅನೇಕ ಬುಡಕಟ್ಟು ಜನರನ್ನು ಸಂದರ್ಶಿಸಿದೆ. ಹಾಲಕ್ಕಿ, ಗೊಂಡವರು, ಇವರ ಕಲಾಪ್ರಕಾರದ ಅಂಶಗಳನ್ನು ತಿಳಿಯುವ ಹಾಗಾಯಿತು' ಎನ್ನುವ ಭಾರತಿ, ಬುಡಕಟ್ಟು ಜನರು ತಮ್ಮ ಗೋಡೆಗಳನ್ನು ರಂಗೋಲಿಯಲ್ಲಿ ಅಲಂಕರಿಸಿದರೆ, ಸಾಮಾನ್ಯ ಮಹಿಳೆಯರು ಮನೆಯೆದುರಿಗಿನ ಅಂಗಳದಲ್ಲಿ ರಂಗೋಲಿ ಬಿಡಿಸುತ್ತಾರೆ, ಧಾರ್ಮಿಕ ವಿಧಿವಿಧಾನಗಳಲ್ಲಿ ಮುಖ್ಯವಾಗಿ ಹೋಮ ಹವನಗಳ ಮುಂಚೆ ಮಂಡಲವನ್ನು ಬಿಡಿಸುತ್ತಾರೆ ಎಂದು ವಿವರಿಸುತ್ತಾರೆ.

ದೀಪಾವಳಿ ಹಬ್ಬದಲ್ಲಂತೂ ಕೊಟ್ಟಿಗೆಯ ಬಾಗಿಲು ಗೋಡೆಗಳ ಮೇಲೆ, ಒಲೆಗಳ ಮೇಲೆ, ಅಷ್ಟೇ ಏಕೆ ದನಕರುಗಳ ಮೇಲೂ ಶೇಡಿ ಬರೆಯುವುದುಂಟು. ಇದನ್ನು ಶೇಡಿ ಬರೆಯುವುದು ಎನ್ನುತ್ತಾರೆಯೇ ಹೊರತು ರಂಗೋಲಿ ಎನ್ನುವುದಿಲ್ಲ.



'ರಂಗೋಲಿಗೊಂದು ಶಿಷ್ಟ ರೂಪ ಇದ್ದರೂ ಗೆರೆ ಎಳೆದು, ಗೀಟು ಹಾಕಿ ಚಿತ್ರ ಬಿಡಿಸುವುದು ಆದಿಮಾನವನಿಂದ ಬೆಳೆದು ಬಂದಿದೆ. ಹಾಲಕ್ಕಿ ಜನ, ಕರಿಒಕ್ಕಲಿಗರು, ಗೊಂಡರು, ಸಿದ್ದಿಗಳು, ಮೊಗೇರು ಹೀಗೆ ಎಲ್ಲ ಬುಡಕಟ್ಟು ಜನರೂ ಗೋಡೆಗಳ ಮೇಲೆ ಚಿತ್ರ ಬರೀತಾರೆ. ಇದನ್ನು ಅವರು ಹಸೆ, ಚಿತ್ತಾರ, ಹಲಿ ಬರಿಯೋದು. ಗೀಟ್ ಹಾಕೋದು ಎಂದು ಕರೆಯುತ್ತಾರೆ. ಹೀಗೆ ತಮ್ಮಲ್ಲಿರುವ ಕಲೆಯನ್ನು ಗೋಡೆಯ ಮೇಲೆ, ಅಂಗಳದಲ್ಲಿ, ಬಾಗಿಲುಗಳ ಮೇಲೆಲ್ಲ ಬಿಡಿಸುತ್ತ ಬಂದು ಈಗ ರಂಗೋಲಿ ಎಂದು ಜನಪ್ರಿಯವಾಗಿರಬಹುದು' ಎಂದು ವಿವರಿಸುತ್ತಾರೆ ಭಾರತಿ.

## ಮಹಿಳೆಯ ಕಲೆ

ರಂಗೋಲಿ ಎಲ್ಲ ಅರ್ಥದಲ್ಲೂ ಮಹಿಳೆಯರ ಕಲೆ. ಹಳ್ಳಿಯಾಗಲಿ, ನಗರವಾಗಲಿ ಪ್ರತಿ ದಿವಸ ಬೆಳಿಗ್ಗೆ ಹೆಂಗಳೆಯರು ಅಂಗಳದಲ್ಲಿ ಕೂತು ರಂಗೋಲಿ ಬಿಡಿಸುವ ದೃಶ್ಯ ಸಾಮಾನ್ಯ. ನಮ್ಮನೆ ಕೂಸು, ನಮ್ಮನೆ ತಂಗಿ ಚೆಂದನೆಯ ರಂಗೋಲಿ ಬಿಡಿಸುತ್ತಾಳೆಂಬುದು ಹಿರಿಯರಿಗೆ ಹೆಮ್ಮೆಯ ವಿಷಯವಾಗಿದ್ದರೆ, ಆ ಹೆಣ್ಣುಮಕ್ಕಳಿಗೆ ರಂಗೋಲಿ ತಮ್ಮ ಭಾವನೆಗಳನ್ನು ಹೊರಹಾಕುವ ಒಂದು ಮಾಧ್ಯಮವೂ ಹೌದು. ಹೇಗೆ ಅವಳ ದುಗುಡ, ಹೊರಹಾಕಲು ಹಾಡೊಂದು ಮಾಧ್ಯಮವಾಗಿತ್ತೋ ಹಾಗೇ ರಂಗೋಲಿ ಅವಳ ಸಂಭ್ರಮದ ಮಾಧ್ಯಮ. ರಂಗೋಲಿಯೆಂಬುದು ಬಣ್ಣಗಳ ಸಮ್ಮಿಳನ ಮಾತ್ರವಲ್ಲ. ಅವಳಿಗಿದೊಂದು ಭಾವನಾತ್ಮಕ ಬೆಸುಗೆ.

ಹೊಸ್ತಿಲಿಗೆ ಮಂಗಳವ ಬರೆವಾಕೆ,
ಶುಭವ ತಾ ಎಂದು ಕರೆಯುವಾಕೆ
ಎಂದು ವರಕವಿ ಬೇಂದ್ರೆ ಅಜ್ಜ ಹೇಳಿದರೆ,
ರನ್ನದ ರಂಗೋಲೆಯ ಬರದಾಳು
ಬರದಾಳು ತಂಗ್ಯಮ್ಮ ಓಲೆ ಭಾಗ್ಯವನೆ ತನಗೆಂದು...
ಎಂದು ಜನಪದರು ಹೇಳಿದ್ದಾರೆ.

ಈಗೀಗ ಪುರುಷರೂ ರಂಗೋಲಿ ಹಾಕುತ್ತಿದ್ದಾರೆ. 'ರಂಗವಲ್ಲಿ ಬ್ರಹ್ಮ' ಎಂದೇ ಖ್ಯಾತರಾದ ನನ್ನ ಗುರುಗಳಾದ ಬಿ.ಪಿ.ಬಾಯರಿ ಅವರು ರಂಗವಲ್ಲಿಯ ವಿನ್ಯಾಸಗಳ ಕುರಿತು ಪುಸ್ತಕ ಬರೆದು 12 ಸಂಪುಟಗಳನ್ನು ಮಾಡಿದ್ದಾರೆ ಎಂದು ವಿವರಿಸುತ್ತಾರೆ ಭಾರತಿ.

## ಕೊರೊನಾ ರಂಗೋಲಿ

ಪರಿಸ್ಥಿತಿಗೆ ಅನುಗುಣವಾಗಿ ಭಾರತಿ ತಮ್ಮ ವಿನ್ಯಾಸವನ್ನು ಬದಲಿಸುತ್ತ ಬಂದಿದ್ದಾರೆ. ಈ ಪೈಕಿ ಪ್ರಸಿದ್ಧಿ ಪಡೆದಿದ್ದೆಂದರೆ, ಬೆಂಗಳೂರಿನಲ್ಲಿ ಕೆಂಪೇಗೌಡ ಜನ್ಮಶತಾಬ್ದಿ ಸಮಯದಲ್ಲಿ ಬೆಂಗಳೂರಿನ ಇತಿಹಾಸವನ್ನು ರಂಗೋಲಿಯಲ್ಲಿ ತಂದದ್ದು ಮತ್ತು ಕೋವಿಡ್ ಸಂದರ್ಭದಲ್ಲಿ ಕೊರೊನಾದ ವಿವಿಧ ಹಂತಗಳನ್ನು ರಂಗೋಲಿಯಲ್ಲಿ ಬಿಡಿಸಿ ಜಾಗೃತಿ ಮೂಡಿಸಿದ್ದು.

ಈಗ ಕೆಲಸ ಹಗುರವಾಗಲಿ ಎಂಬ ಕಾರಣಕ್ಕೆ ರಂಗೋಲಿ ಪ್ಲೇಟ್‌ಗಳು, ಕೊಳವೆಗಳೆಲ್ಲ ಬಂದಿವೆ. ಆದರೆ ಇವುಗಳಲ್ಲಿ ರಂಗೋಲಿ ಎಳೆಯ ಸೂಕ್ಷ್ಮಗಳಿರೋದಿಲ್ಲ. ಹಾಗೆ ನೋಡಿದರೆ ಕೈ ಬೆರಳಿಗೂ ನಮ್ಮ ಮೆದುಳಿಗೂ ಒಂದು ಸಂಪರ್ಕ ಇರುತ್ತದೆ. ರಂಗೋಲಿ ಹಾಕುವುದರಿಂದ ನರಮಂಡಲಕ್ಕೆ ಉತ್ತಮ ವ್ಯಾಯಾಮ. ಇನ್ನು ರಂಗೋಲಿ ಹಾಕಲು ಕೂತರೆಂದರೆ ಇಡೀ ದೇಹಕ್ಕೆ ಕೆಲಸ ಕೊಡುತ್ತದೆ. ಕುಕ್ಕರಗಾಲಲ್ಲಿ ಕುಳಿತು ರಂಗೋಲಿ ಚುಕ್ಕೆ ಇಟ್ಟು, ಎಳತಿಗೆ ಹಾಕುವ ಶ್ರಮ ಇಡೀದೇಹಕ್ಕೆ ವ್ಯಾಯಾಮ ಒದಗಿಸುತ್ತದೆ.

ಅಂಗವಿಕಲರಿಗೆ ರಂಗೋಲಿಯ ಥೆರಪಿಯನ್ನೂ ಕೊಡಬಹುದು ಎನ್ನುತ್ತಾರೆ ಭಾರತಿ ಮರವಂತೆ. ರಂಗೋಲಿಯ ಕುರಿತಾಗಿ ಮಕ್ಕಳಿಗೆ ಕಲಿಸಲು ಪಠ್ಯಪುಸ್ತಕಗಳಲ್ಲಿ ಒಂದು ಪಾಠವನ್ನು ಅಳವಡಿಸಬೇಕೆಂಬುದು ಅವರ ಆಗ್ರಹ. ಭಾರತದ ಎಲ್ಲ ರಂಗೋಲಿ ಕಲಾ ಪ್ರಕಾರಗಳನ್ನೂ ದಾಖಲಿಸುತ್ತಿರುವ ಅವರು, ರಂಗೋಲಿ ಎನ್ನುವ ಕಲೆಗೂ ಪರಿಷತ್ತು–ಅಕಾಡೆಮಿಗಳಲ್ಲಿ ವಿಶೇಷವಾದ ವೇದಿಕೆ ಇರಬೇಕು ಎಂದು ಒತ್ತಾಯಿಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in